## HIGH COURT OF KARNATAKA

## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2023

## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2023

## TRANSLATION PAPER

## ಭಾಷಾಂತರ ಪತ್ರಿಕೆ

Date: 18.11.2023 | Max Marks: 100

ದಿನಾಂಕ: 18.11.2023 | ಗರಿಷ್ಠ ಅಂಕಗಳು: 100

Time: 10.00 AM to 1.00 PM

ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instructions:**

**ಸೂಚನೆಗಳು:**

Write your register number only on the cover page in the space provided in the answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

1. **Translate the following deposition to Kannada language:** Marks:15
ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ: ಅಂಕಗಳು: 15

**Cross-examination by the Counsel for plaintiff:**

Ex.D-84 is prepared by me. I do not know under whose instructions I have prepared Ex.D-84. The contents of letter Ex.D-84 are true. I have prepared Ex.D-84 to pass on information to the plaintiff that we are receiving shortage in the materials supplied by him. I have narrated under Ex.D-84 the information provided to me by our Bharapur Plant. I have not produced the letter received by me from Bharapur Plant in this suit. It is true that I have not written complete address of the plaintiff as it is sent by Fax. The Fax number is not visible. On the basis of Report from our Bharapur Plant, I have stated details of shortfall to the extent of 207 metric tons. I have written Ex.D-84 in respect of supply of 3rd Railway Rake loaded on 02.01.2008. I do not know as to who was our representative at Hosapete during that period. I can't say whether Ex.D-84 was produced for the first time during 2011 before Hon'ble Supreme court on 30.01.2011. It is false to suggest that our Advocate in his Legal Notice has also not referred to the details mentioned in Ex.D-84.

It is true that Ex.P-1197 never show any reference to letter Ex.D-84. Witness states that Advocate need not refer each and every letter and its details in the reply notice. Our Legal Department might have issued instructions to our Advocate to prepare reply Ex.P-1197 but I do not know exactly who has instructed to prepare

such reply notice. It is true that the shortfall about 207 metric tons as referred to under Ex.D-84 is not stated under Ex.P-1197. It is true that we have not separately stated about 207 metric tons details in our written statement and also in examination-in chief with regard to 3rd Rake as mentioned under Ex.D-84.

In our written statement I have detailed the shortage in metric tons in Column No.4 in respect of Rail Rake Nos.1 to 6 in serial order. We have prepared such statement based on our Chargeable Weight of Railway Receipts and the details of materials supplied through C.T.A. Logistics. In respect of 3rd Rake there is shortfall of 134.26 metric tons. Even in counter claim the same 134.26 at page No.12 is stated. In my written statement at Page No.5, total quantity received is mentioned as 2334.74 whereas in counter claim same weight is mentioned as 207 metric tons. According to me, both entries are correct because while preparing Ex.D-84 it was on going process.

**2. Translate the following Passage as extracted from a Judgment to Kannada language:** Marks:15
**ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.** ಅಂಕಗಳು: 15

This is a suit for partition filed in respect of Sy.No.156 A/1 measuring 2.00 acres situated at Metri Village. PWs-1 and 2 have reiterated the plaint averments in their evidence. It is the specific case of the plaintiff that, suit schedule property was allotted to his father in a partition held between his father and his brothers. Unfortunately no document is produced before the Court to show that, the property in question was originally came to the plaintiff's

father as stated in para 4 of the plaint. 1968 document is referred to in the plaint, but such document is not made available before the Court. The only document produced before the Court is RTC Ex.P-6. Ex.P-6 disclose that, an extent of 3.20 acres is standing in the name of one K.Pampanna. Whether the said person K.Pampanna is the father of plaintiff or not is not clear. Cause title disclose that, the name of the father of plaintiff as Kurubara Pampanna. On going through the plaint paragraph 4, the plaintiff clearly states that, the suit schedule property came to his father in a partition took place in the year 1968. The plaintiff has not attempted to produce the 1968 partition deed, even after referring to the said document in the plaint.

On going through the plaint allegations and the evidence lead before the Court, the main grievance of the plaintiff is that, portion of suit schedule property was sold by defendant No.1 and 2 and husband of defendant No.3 and 4 in favour of defendant No.8 and defendant No.8 in turn has sold the same in favour of defendant No.6 and 7. The sale deeds are produced before the Court. On going through the Certified copies of sale deed Ex.P-1, it is seen that the 8th defendant has sold an extent of 16 x 10 ft plus some more portion in favour of one Onkarappa the 6th defendant herein for a valuable sale consideration. On going through the sale deed, there is absolutely no reference to the survey number in any manner. It is just stated that, a vacant plot situated in 4th ward of Metri is sold in favour of 6th defendant. Ex.P-2 is also a sale deed executed by 8th defendant in favour of the 7th defendant herein,

wherein similar description of property is stated. The 3rd sale deed is Ex.P-4 wherein 6th defendant Onkarappa has purchased property to the extent of 16 Mola x 42 Mola property situated in 4th ward of Metri village. There is absolutely no link document to show that the properties covered under Ex.P-1 to 4 are in any way related to suit property in any manner. The plaintiff alleged in the plaint that, suit schedule property is sold in favour of defendant No.6 and 7 by 8th defendant. Hence, it would be very difficult to link these plots sold in favour of defendant No.6 and 7 to the suit property in the absence of valid documents.

**3. <u>Translate the following deposition to English language:</u>**

Marks: 15

<u>ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ.</u> ಅಂಕಗಳು: 15

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಬಿ.ಸಿ. ರವರಿಂದ:**

1. ನಾನು ವ್ಯವಸಾಯ ಮಾಡುತ್ತೇನೆ ಅದರ ಜೊತೆಗೆ ಎಲ್.ಐ.ಸಿ ಏಜೆಂಟ್ ಸಹ ಇದ್ದೇನೆ. ನನಗೆ ಸಂಬಂಧಿಸಿದ ಜಮೀನು ಕಬಳಿ ಹೊಸಳ್ಳಿ ಗ್ರಾಮದಲ್ಲಿದೆ ಅದಕ್ಕೆ ಜಿ.ಎಸ್.ಕವಲು ಎಂದು ಕರೆಯುತ್ತಾರೆ. ನನ್ನ ಹೆಸರಿನಲ್ಲಿ ಒಂದುವರೆ ಎಕರೆ ಖುಷ್ಕಿ ಜಮೀನು ಇದೆ. ನನ್ನ ಜಮೀನಿನ ಮೇಲೆ ಈಗ್ಗೆ 5–6 ವರ್ಷಗಳಿಂದ ನಾನು ರೂ.50,000/– ಸಾಲ ಪಡೆದುಕೊಂಡಿದ್ದೇನೆ. ಆರೋಪಿ ನಿಮಗೆ ಹೇಗೆ ಪರಿಚಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ತಾವು ಎಲ್.ಐ.ಸಿ. ಏಜೆಂಟ್ ಕೆಲಸದ ನಿಮಿತ್ತ ಅವರ ಊರಿಗೆ ಹೋಗಿದ್ದಾಗ ಅಲ್ಲಿ ಪರಿಚಯವಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರಿನಲ್ಲಿ ಏನಾದರೂ ಎಲ್.ಐ.ಸಿ ಪಾಲಿಸಿ ಮಾಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಅವರ ಹೆಸರಿನಲ್ಲಿ

ಮಾಡಿಸಲಿಲ್ಲ ಅದರೆ ಅವರ ಊರಿನಲ್ಲಿರುವ ಬೇರೆಯವರ ಹೆಸರಿನಲ್ಲಿ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ.

2. ಆರೋಪಿಯ ಮನೆಯನ್ನು ನೀವು ನೋಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನೋಡಿದ್ದೇನೆ ಅವರ ಮನೆ ಊರಲ್ಲಿ ಇಲ್ಲ ತೋಟದಲ್ಲಿ ಇದೆ ಎಂದು ನುಡಿಯುತ್ತಾರೆ. ಆರೋಪಿಯು ಏನು ವ್ಯವಹಾರ ಮಾಡುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ವ್ಯವಸಾಯ ಮಾಡುತ್ತಾರೆ ಅವರಿಗೆ ತೆಂಗು ಮತ್ತು ಜೋಳದಲ್ಲಿ ಒಳ್ಳೆಯ ಆದಾಯ ಇದೆ ಎಂದು ನುಡಿಯುತ್ತಾರೆ. 2020ರಲ್ಲಿ ನೀವು ನಿಮ್ಮ ಜಮೀನಿನಲ್ಲಿ ಜೋಳ ಮತ್ತು ಶುಂಠಿಯನ್ನು ಯಾವ ತಿಂಗಳಲ್ಲಿ ಹಾಕಿದ್ದಿರಿ ಮತ್ತು ಅದನ್ನು ಯಾವಾಗ ಕಟಾವು ಮಾಡಿಕೊಂಡಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 2019ರ ಜೂನ್ ಜುಲೈ ತಿಂಗಳಲ್ಲಿ ಶುಂಠಿ ಹಾಕಿದ್ದೆ, ಆಗಸ್ಟ್ ತಿಂಗಳಲ್ಲಿ ಜೋಳ ಹಾಕಿದ್ದೆ, ಜೋಳದ ಫಸಲು 5 ತಿಂಗಳು ನಂತರ ಬಂತು ಆಮೇಲೆ ಶುಂಠಿಯ ಫಸಲು 10 ತಿಂಗಳ ನಂತರ ಬಂದಿತು ಎಂದು ಉತ್ತರಿಸುತ್ತಾರೆ. ಆಗ ನನಗೆ ಜೋಳ 70 ಕ್ವಿಂಟಾಲ್ ಮತ್ತು ಶುಂಠಿ 100 ಚೀಲ ಫಸಲು ಬಂದಿತ್ತು. ಆಗ ಜೋಳ 1 ಕ್ವಿಂಟಾಲ್‌ಗೆ ರೂ.1,700/- ಸಿಕ್ಕಿತು ಮತ್ತು ಶುಂಠಿಯಲ್ಲಿ 1 ಲಕ್ಷ 20 ಸಾವಿರ ರೂಪಾಯಿ ನನಗೆ ಸಿಕ್ಕಿತು. ಜೋಳವನ್ನು ಎ.ಪಿ.ಎಂ.ಸಿ. ಗೆ ಮಾರಿರುತ್ತೇನೆ. ಎ.ಪಿ.ಎಂ.ಸಿ. ಯವರು ಜೋಳವನ್ನು ತೆಗೆದುಕೊಂಡಾಗ ಯಾರಿಂದ ಖರೀದಿ ಮಾಡಿರುತ್ತಾರೆ ಎಂಬ ಬಗ್ಗೆ ವಿವರವನ್ನು ಅಂದರೆ ಸರ್ವೆ ನಂಬರ್, ಎಷ್ಟು ಎಕರೆ ಎಂಬಿತ್ಯಾದಿ ಎಲ್ಲಾ ಮಾಹಿತಿಗಳನ್ನು ಬರೆದುಕೊಂಡು ಹಣವನ್ನು ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಕಳುಹಿಸುತ್ತಾರೆ ಎಂದರೆ ಸರಿ.

3. ನನ್ನ ಒಂದುವರೆ ಎಕರೆ ಜಮೀನಿನಲ್ಲಿ ನಾನು 70 ಕ್ವಿಂಟಾಲ್ ಜೋಳ ಮತ್ತು 100 ಚೀಲ ಶುಂಠಿಯನ್ನು ಬೆಳೆಯಲು ಸಾಧ್ಯವಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಆದರೆ ನಾನು ಬೇರೆ ಜಮೀನುಗಳನ್ನು ಸಹ ಗುತ್ತಿಗೆ ಮಾಡಿದ್ದೆ ಎಂದು ನುಡಿಯುತ್ತಾರೆ. 2020ರಲ್ಲಿ ಜೋಳ ಮತ್ತು ಶುಂಠಿಗೆ ಅಷ್ಟೊಂದು ಬೆಲೆ ಇರಲಿಲ್ಲ ಜೋಳ ಮತ್ತು ಶುಂಠಿ ಬೆಳೆದ ರೈತರು ಆ ವರ್ಷ ಲಾಭ ಸಿಗದೇ ತುಂಬಾ ನಷ್ಟವನ್ನು ಅನುಭವಿಸಿರುತ್ತಾರೆ ಎಂದರೆ ಸರಿಯಲ್ಲ.

**4. <u>Translate the following Passage as extracted from a Judgment to English language:</u>** **Marks:15**

<u>ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:</u> ಅಂಕಗಳು: 15

1. ಈ ದಾವೆಯ ಒಂದನೇ ಪ್ರತಿವಾದಿಯು ವಾದಿ ಬ್ಯಾಂಕಿನಿಂದ ರೂ.2,00,000/- ಗಳ ವೈಯಕ್ತಿಕ ಸಾಲವನ್ನು ಪಡೆದಿರುತ್ತಾರೆ. ಸದರಿ ಸಾಲಕ್ಕೆ 2ನೇ ಪ್ರತಿವಾದಿ ಭದ್ರತೆ ನೀಡಿರುತ್ತಾರೆ. ಒಂದನೇ ಪ್ರತಿವಾದಿಯರು ರೂ.2,00,000/-ಗಳನ್ನು ವಾರ್ಷಿಕ ಶೇಕಡ 13.90% ಬಡ್ಡಿಯನ್ನು ಪಾವತಿಸಲು ಒಪ್ಪಿರುತ್ತಾರೆ. ಆದರೆ, ಒಂದನೇ ಪ್ರತಿವಾದಿಯರು ಪಡೆದ ಸಾಲವನ್ನು ಮರುಪಾವತಿಸಲು ತಪ್ಪಿರುತ್ತಾರೆ. ಎರಡನೇ ಪ್ರತಿವಾದಿಯು ಸದರಿ ಒಂದನೇ ಪ್ರತಿವಾದಿಯು ಪಡೆದ ಸಾಲದ ಹಣಕ್ಕೆ ಭದ್ರತೆ ನೀಡಿರುತ್ತಾರೆ. ಪ್ರತಿವಾದಿಯರಿಗೆ ಸಾಲದ ಹಣವನ್ನು ಮರುಪಾವತಿಸುವಂತೆ ನೋಟಿಸ್ ನೀಡಿದ ನಂತರವೂ ಸಹ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ. ಆದ್ದರಿಂದ, ವಾದಿಯು ಸಾಲದ ವಸೂಲಾತಿ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

2. ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 101 ರಂತೆ ವಾದಿಯು ತನ್ನ ವಾದಪತ್ರದಲ್ಲಿನ ಸಂಗತಿಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ದಾವೆಯಲ್ಲಿನ ಸಂಗತಿಗಳನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ ವಾದಿಯು ತನ್ನನ್ನು ತಾನು ಪ್ರಾಸಾ–1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ನಿಪಿ–1 ರಿಂದ 13 ದಾಖಲಾತಿಗಳನ್ನು ತಮ್ಮ ಪರವಾಗಿ ನಿಶಾನಿಕರಿಸಿಕೊಂಡಿರುತ್ತಾರೆ. ವಾದಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ವಾದಪತ್ರದಲ್ಲಿನ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ ಹಾಗೂ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ನಿಪಿ–1 ದಾಖಲಾತಿಯು ದಿ:25.04.2018ರ ವೈಯಕ್ತಿಕ ಸಾಲ ಕೋರಿ ಸಲ್ಲಿಸಿರುವ ಅರ್ಜಿಯಾಗಿರುತ್ತದೆ, ನಿಪಿ–2 ಸಾಲ ಮಂಜೂರಾತಿ ಪತ್ರ, ನಿಪಿ–3 ಸಾಲ ಒಪ್ಪಂದ ಪತ್ರ, ನಿಪಿ–4 ಒಂದನೇ ಪ್ರತಿವಾದಿ ಸಾಲವನ್ನು ಮರುಪಾವತಿಸುವ ಬಗ್ಗೆ ಜಾರಿ ಒಪ್ಪಂದ ಪತ್ರ, ನಿಪಿ–5 ರಿಂದ ನಿಪಿ–7 ಒಂದನೇ ಪ್ರತಿವಾದಿಗೆ ವಾದಿ ಬ್ಯಾಂಕ್ ಜಾರಿ ಮಾಡಿದ ನೋಟೀಸ್‌ಗಳು ಅಂಚೆ ಕವರ್, ನಿಪಿ–8(ಎ) ರಿಂದ ನಿಪಿ–12(ಎ) ಸದರಿ ಅಂಚೆ ಕವರುಗಳಲ್ಲಿದ್ದ ನೋಟೀಸ್‌ಗಳು ನಿಪಿ–12 1ನೇ ಪ್ರತಿವಾದಿ ಸಾಲದ ಖಾತೆಗೆ ಸಂಬಂಧಿಸಿದ ಸ್ಟೇಟ್‌ಮೆಂಟ್ ಆಗಿರುತ್ತದೆ.

3. ವಾದಿಯು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ನಿಪಿ–1 ಮತ್ತು ನಿಪಿ–2 ದಾಖಲಾತಿಗಳಂತೆ ಒಂದನೇ ಪ್ರತಿವಾದಿಯು ವೈಯಕ್ತಿಕ ಸಾಲ ಕೋರಿ ಸಲ್ಲಿಸಿರುವ ಅರ್ಜಿ, ಹಾಗೂ ಸದರಿ ಅರ್ಜಿಯನ್ನು ಪುರಸ್ಕರಿಸಿ ವಾದಿ ಬ್ಯಾಂಕ್ ನಿಪಿ–2ರಂತೆ ರೂ 2,00,000/–ಗಳನ್ನು ಮಾಸಿಕ ರೂ.4,643/–ಗಳ ಕಂತನ್ನು ವಾರ್ಷಿಕ 13.50% ರಂತೆ ಬಡ್ಡಿಯನ್ನು ಪಾವತಿಸುವ ಷರತ್ತಿನಂತೆ ಸಾಲವನ್ನು ಮಂಜೂರು ಮಾಡಿರುವುದು ಕಂಡು ಬಂದಿರುತ್ತದೆ. ಮುಂದುವರೆದು, ಪ್ರತಿವಾದಿಯರು

ಸದರಿ ಸಾಲವನ್ನು ಮರುಪಾವತಿಸುವುದಾಗಿ, ಒಂದನೇ ಪ್ರತಿವಾದಿಯು ಪಡೆದ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ. ಆದ್ದರಿಂದ, ವಾದಿ ಬ್ಯಾಂಕ್ ಸಾಲವನ್ನು ಮರುಪಾವತಿಸುವಂತೆ ಕೋರಿ ನೋಟೀಸ್‌ಗಳನ್ನು ಸಹ ನೀಡಿರುವುದು ಕಂಡು ಬರುತ್ತಿದೆ. ಆ ನಂತರವೂ ಸಹ ಪ್ರತಿವಾದಿಯರು ಸದರಿ ಸಾಲದ ಹಣವನ್ನು ಪಾವತಿಸಲು ವಿಫಲರಾಗಿರುತ್ತಾರೆ ಎಂಬುದು ಕಂಡು ಬಂದಿರುತ್ತದೆ.

**5. Translate the following document to Kannada language:**

Marks: 20

**ಈ ಕೆಳಕಂಡ ದಸ್ತಾವೇಜನ್ನು ಕನ್ನಡ ಭಾಷೆಗೆ ಅನುವಾದಿಸಿ:** ಅಂಕಗಳು: 20

**RELEASE DEED**

This **DEED OF RELEASE** executed on this the 18th day of November 2023 by Ramesh S/o Ganesh residing at No.23, 9th cross, Jayanagar hereinafter referred to as the **RELEASOR** of the One Part;

AND IN FAVOUR OF

Satish S/o Ganesh, residing at No. 46, 7th cross, RPC layout, Vijayanagar hereinafter referred to as the **RELEASEE** of the Other Part;

The term RELEASOR and RELEASEE shall mean and include their heirs, executors, legal representatives and assigns.

WHEREAS the property measuring an extent of 1200 sq.ft and building thereon situated in Door No.40 in Salagame Village within

the limits of Hassan District was acquired by the father of the Releasor and Releasee under sale deed dated 01.02.1992 from one Sarvesh which is registered as Document No.2023 of Book 1 volume 72 in pages 53-63 on the file of the Sub Registar of Hassan.

WHEREAS the father of the Releasor and the Releasee died intestate leaving behind the Releasor and Releasee as his class I legal heirs.

WHEREAS the property more fully described in the Schedule hereunder is one of indivisible properties and it has been agreed by the Releasor to release his undivided ½ right and share in the property in favour of the Releasee and the Releasee has also accepted for the same.

NOW THIS DEED OF RELEASE WITNESSETH AS FOLLOWS;

THAT the RELEASOR did not received any consideration from the RELEASEE herein has released and relinquished his undivided ½ right in the property morefully described in the Schedule hereunder in favour of the Releasee herein.

THAT the RELEASOR hereafter do not have any right, title, interest over the schedule mentioned property and the RELEASEE hereafter enjoy the same absolutely with full right, title and interest over the property more fully described in the schedule hereunder.

THAT the RELEASOR covenant and undertake to execute any further documents that may be necessary for assuring the title in favour of the RELEASEE herein in respect of the property more fully schedule at the cost of the RELEASEE.

**SCHEDULE PROPERTY**

All the part and parcel of property bearing No.40 situated at Salagame Village Hassan District measuring 1,200 sft. (40x30) with building having plinth area of 300 sft. and bounded on:

| | | |
|---|---|---|
| East by | : | Property No.41 |
| West by | : | Property No.43 |
| South by | : | Property No.42 |
| North by | : | Property No.44 |

In witness Whereof the RELEASOR and RELEASEE have set their hands and Signatures on the day, month and year first above written in the presence of

WITNESSES: RELEASOR

RELEASEE

1.

2.

## 6. Translate the following document to English language:

Marks: 20

**ಈ ಕೆಳಕಂಡ ದಸ್ತಾವೇಜನ್ನು ಆಂಗ್ಲ ಭಾಷೆಗೆ ಅನುವಾದಿಸಿ:** ಅಂಕಗಳು: 20

### ಕ್ರಯಕ್ಕಾಗಿ ಕರಾರು

ಸನ್ ಎರಡು ಸಾವಿರದ ಹತ್ತನೇ ಇಸವಿ ನವೆಂಬರ್ ಮಾಹೆ 22ನೇ ತಾರೀಖು (22.11.2010) ರಂದು ಮಾಡಿಕೊಂಡ ಕ್ರಯಕ್ಕಾಗಿ ಕರಾರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು ದೊಡ್ಡಬೆಳವಂಗಲ ಹೋಬಳಿ ಹನುಮಾಪುರ ಗ್ರಾಮದ ಮುಖ್ಯ ರಸ್ತೆಯಲ್ಲಿರುವ ರಾಮಣ್ಣ ಬಿನ್ ಚಂದ್ರಣ್ಣ ವಯಸ್ಸು 22 ವರ್ಷ ಈ ಪತ್ರದ ಮೊದಲನೇ ಪಾರ್ಟಿಯಾಗಿಯೂ, ಇನ್ನು ಮುಂದೆ ಈ ಪತ್ರದಲ್ಲಿ ಇವರನ್ನು ಮೊದಲನೇ ಪಾರ್ಟಿಗಳೆಂದು ಸಂಬೋದಿಸಲಾಗಿದ್ದು, ಮೊದಲನೇ ಪಾರ್ಟಿಗಳೆಂದರೆ ಇವರ ಉತ್ತರ ವಾರಸ್ಸುದಾರರು, ಇವರಿಗೆ ಹಕ್ಕು ನೀಡಿದವರು, ಆಡಳಿತಾತ್ಮಕರು, ನಿಯೋಜಿತರು ಸೇರಿರುತ್ತಾರೆಂದು ತಿಳಿಯುವುದು.

ಬೆಂಗಳೂರು ನಗರದಲ್ಲಿ ಸ್ಥಾಪಿತವಾದ 'ಮನಸಿರಿ (ರಿ)' ಎಂಬ ನೊಂದಾಯಿತ ಪಾಲುದಾರಿಕೆ ಫರ್ಮ್ (ನೊ.ಸಂ.100/20) ಇದರ ನೊಂದಾಯಿತ ವಿಳಾಸ: 7ನೇ ಮುಖ್ಯ ರಸ್ತೆ, ಜೈನಗರ ಬೆಂಗಳೂರು ಇದರ ಪರವಾಗಿ ಹಾಲಿ ಮ್ಯಾನೇಜಿಂಗ್ ಪಾರ್ಟನರ್ ಆದ ಶಿವರಾಮ ಶೆಟ್ಟಿ, ಬಿನ್ ಆದಿಶೇಷ ಶೆಟ್ಟಿ ನಂ. 16, 4ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಚಾಮರಾಜಪೇಟೆ ವಾಸಿ ಈ ಪತ್ರದ ಎರಡನೇ ಪಾರ್ಟಿಯಾಗಿಯೂ, ಇನ್ನು ಮುಂದೆ ಈ ಪತ್ರದಲ್ಲಿ ಇವರನ್ನು ಎರಡನೇ ಪಾರ್ಟಿಗಳೆಂದು ಸಂಭೋದಿಸಲಾಗಿದ್ದು, ಎರಡನೇ ಪಾರ್ಟಿಗಳೆಂದರೆ ಇವರ ಉತ್ತರಾಧಿಕಾರಿಗಳು ಆಡಳಿತಾತ್ಮಕರು, ನಿಯೋಜಿತರು ಸೇರಿರುತ್ತಾರೆಂದು ತಿಳಿಯುವುದು.

ಈ ಕೆಳಕಂಡ ಷೆಡ್ಯೂಲ್ ಸ್ವತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ದೊಡ್ಡಬೆಳವಂಗಲ ಹೋಬಳಿ, ಹನುಮಪುರ ಗ್ರಾಮದಲ್ಲಿದ್ದು ಅದನ್ನು ವಿಸ್ತಾರವಾಗಿ ಷೆಡ್ಯೂಲ್‌ನಲ್ಲಿ ವಿವರಿಸಿರುವಂತೆ (ಒಂದನೇ ಪಾರ್ಟಿಗಳು ಸ್ವಯಾರ್ಜಿತವಾಗಿ ಕೊಂಡುಕೊಂಡಿದ್ದು ಸದರಿ ಕ್ರಯವು ದೊಡ್ಡಬಳ್ಳಾಪುರ ಉಪನೊಂದಾವಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ಎರಡನೇ ವಾಲ್ಯೂಮ್‌ರಲ್ಲಿ ಸಿ.ಡಿ. ನಂ.5 ದಿನಾಂಕ 01.01.2005 ರಲ್ಲಿ ನೊಂದಾವಣಿಯಾಗಿದ್ದು ಖಾತೆ ಪಹಣಿ ಆಗಿದ್ದು ಶಾಂತರೀತಿಯಿಂದ ಸ್ವಾಧೀನಾನುಭವದಲ್ಲಿರುವುದು ಸರಿಯಷ್ಟೆ.) / ಎರಡನೇ ಪಾರ್ಟಿಗಳಾದ ಮನಸಿರಿ (ರಿ) ಇದರ ಪಾಲುದಾರರು ಆಗಿರುವ ಎರಡನೇ ಪಾರ್ಟಿಗಳು ಸದರಿ ಸ್ವತ್ತನ್ನು ಪಾಲುದಾರಿಕೆ ಸಂಸ್ಥೆಯ ಧ್ಯೇಯೋದ್ದೇಶಗಳಿಗೆ ಖರೀದಿಸಲು ಒಪ್ಪಿ ಈ ಕ್ರಯಕ್ಕಾಗಿ ಕರಾರು ಮಾಡಿಕೊಂಡಿದ್ದಾರೆ.

ಮೊದಲನೇ ಪಾರ್ಟಿಗಳು ಮತ್ತು ಎರಡನೇ ಪಾರ್ಟಿಗಳು ಈ ಕೆಳ ಕಂಡ ಷೆಡ್ಯೂಲ್ ಸ್ವತ್ತಿನ ವಿಚಾರವಾಗಿ ಈ ಕೆಳಕಂಡ ನಿಯಮಗಳಿಗೆ ಬದ್ಧರಾಗಿ ಮಾಡಿಕೊಂಡ ಕ್ರಯಕ್ಕಾಗಿ ಕರಾರು ಪತ್ರ ಇದಾಗಿದೆ.

1. ಸದರಿ ಈ ಕ್ರಯಕ್ಕಾಗಿ ಕರಾರಿನಂತೆ ಉಭಯರೂ ನಿರ್ದರಿಸಿರುವ ಷೆಡ್ಯೂಲ ಸ್ವತ್ತಿನ ಮೌಲ್ಯ ಸ್ವತ್ತಿಗೆ ಪೂರ್ತಿಯಾಗಿ ರೂ.5 ಲಕ್ಷ (ಐದು ಲಕ್ಷ) ಆಗಿದ್ದು, ಈ ದಿನ ಈ ಪತ್ರದ ಸಾಕ್ಷಿದಾರರ ಸಮಕ್ಷಮ ರೂ 4 ಲಕ್ಷ (ನಾಲ್ಕು ಲಕ್ಷ ರೂಪಾಯಿ) ಮೊದಲನೇ ಪಾರ್ಟಿಗಳು ಎರಡನೇ ಪಾರ್ಟಿಗಳಿಂದ ಪಡೆದಿದ್ದು, ಬಾಕಿ ಮೊತ್ತ 1 ಲಕ್ಷ ವನ್ನು ನೊಂದಾವಣಿ ಸಮಯದಲ್ಲಿ ಪಡೆಯುವುದಾಗಿ ಬರೆಸಿರುವ ಕ್ರಯಕ್ಕಾಗಿ ಕರಾರು ಇದಾಗಿರುತ್ತದೆ.

2. ಷೆಡ್ಯೂಲ್ ಸ್ವತ್ತಿನ ನೊಂದಾವಣಿಗಾಗಿ ಬೇಕಾದ ಎಲ್ಲಾ ದಾಖಲಾತಿಗಳನ್ನು ಮೊದಲನೇ ಪಾರ್ಟಿಗಳೇ ಮಾಡಿಸಿ ಕೊಟ್ಟು ಅಥವ ಅದಕ್ಕಿಂತ ಮುಂಚೆ ಉಬಯರೂ ನಿರ್ದರಿಸಿದಂತೆ, ನೊಂದಾವಣಿ ಮಾಡಿಸಿಕೊಡುವುದಾಗಿ ಮಾಡಿಸಿಕೊಟ್ಟ ಕ್ರಯಕ್ಕಾಗಿ ಕರಾರು ಪತ್ರ ಇದಾಗಿದೆ.

3. ಈ ಕೆಳಕಂಡ ಷೆಡ್ಯೂಲ್ ಸ್ವತ್ತು ಯಾವುದೇ ವ್ಯಾಜ್ಯಗಳಿಲ್ಲದೆ ಮೊದಲನೇ ಪಾರ್ಟಿಗಳ ಸ್ವಾಧೀನಾನುಭವದಲ್ಲಿದ್ದು, ಈ ಕ್ರಯದ ಕರಾರಿನ ಷಡ್ಯೂಲ್ ಸ್ವತ್ತು ಯಾವ ತಂಟೆ ತಕರಾರು, ಪರಭಾರೆ, ಒತ್ತುವರಿ, ಆದಾರ, ಭೋಗ್ಯ, ಕ್ರಯ, ದಾನ, ಕರಾರು, ಬ್ಯಾಂಕ್ ಆಧಾರ ಸಾಲಗಳು, ಅಟ್ಯಾಚಮೆಂಟ್, ಇತರೆ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ, ಒಡೆತನ ಸ್ಥಾಪಿಸತಕ್ಕ ಇತರರಾಗಲೀ, ಇಲ್ಲದಿರುವ ಬಗ್ಗೆ ಮೊದಲನೇ ಪಾರ್ಟಿಗಳು ಕಾನೂನಾತ್ಮಕ ಪರಿಶೀಲನೆ ಮಾಡಿ ಪ್ರತಿನಿದಿಸಿರುವ ಸ್ವತ್ತು ಇದಾಗಿರುತ್ತದೆ. ಎರಡನೇ ಪಾರ್ಟಿಗಳು ಇದರ ಬಗ್ಗೆ ಪರಿಶೀಲಿಸಿ ಹಾಗೊಂದು ವೇಳೆ ಯಾವುದಾದರು ಲೋಪವಿದ್ದಲ್ಲಿ ಕಾನೂನು ಕ್ರಮ ಜರುಗಿಸಲು ಅಧಿಕಾರವುಳ್ಳವರಾಗಿರುತ್ತರೆಂದು ಬರೆಸಿಕೊಟ್ಟ ಕ್ರಯಕ್ಕಾಗಿ ಕರಾರು ಪತ್ರ ಇದಾಗಿರುತ್ತದೆ.

4. ಮೊದಲನೇ ಪಾರ್ಟಿಗಳ ಸದರಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಸರಿಯಾದ ಪೋಡಿ ಮಾಡಿಸಿ, ಹದ್ದುಬಸ್ತು ಮಾಡಿಸಿ, ರೆವಿನ್ಯೂ ನಕ್ಷೆ ತಯಾರಿಸಿಕೊಟ್ಟು, ಭೂಸ್ವಾಧೀನವಾಗಿರದೆ ಇರುವ ಬಗ್ಗೆ ನಿರಕ್ಷೇಪಣಾ ಪತ್ರ ಮಾಡಿಸಿಕೊಟ್ಟು, ಎಲ್ಲಾ ಹಕ್ಕುದಾರರನ್ನು ಕರೆಸಿ ನೇರವಾಗಿ ಎರಡನೇ ಪಾರ್ಟಿಗಳ ನೊಂದಾವಣಿ

ಖರ್ಚಿನೊಂದಿಗೆ ಅವರಿಗಾಗಲೀ ಅವರು ಸೂಚಿಸಿದವರ ಹೆಸರಿಗಾಗಲೀ ನೊಂದಾವಣಿ ಮಾಡಿಸಿಕೊಡಲು ಬದ್ಧರಾಗಿರುತ್ತಾರೆ.

5. ಈ ಕರಾರಿನ ನಂತರ ಇನ್ನಾರಿಗೂ ಯಾವುದೇ ಕ್ರಯ ಕರಾರು ಮೊದಲನೇ ಪಾರ್ಟಿಗಳು ಮಾಡಿಕೊಡುವುದಿಲ್ಲವೆಂದು ನಂಬಿಕೆ ಹೇಳಿ ಬರೆದುಕೊಟ್ಟು ಕ್ರಯಕ್ಕಾಗಿ ಕರಾರು ಪತ್ರ ಇದಾಗಿದೆ.

6. ಸದರಿ ಈ ಕ್ರಯಕ್ಕಾಗಿ ಕರಾರಿನಂತೆ ಷೆಡ್ಯೂಲ್ ಸ್ವತ್ತಿನ ಸ್ವಾಧೀನವು ಹಸ್ತಾಂತರವಾಗಿರುವುದಿಲ್ಲ. ಮೊದಲನೇ ಪಾರ್ಟಿಗಳು ನೊಂದಾವಣಿ ಸಮಯದಲ್ಲಿ ಯಾವುದೇ ವ್ಯಾಜ್ಯಗಳಿಗೆ ಅಸ್ಪದವಾಗದಂತೆ ಸ್ವಾಧೀನ ಹಸ್ತಾಂತರಿಸಲು ಬದ್ಧರಾಗಿರುವುದಾಗಿ ಮಾಡಿಕೊಟ್ಟ ಕ್ರಯಕ್ಕಾಗಿ ಕರಾರು ಇದಾಗಿರುತ್ತದೆ.

7. ಈ ಕ್ರಯಕ್ಕಾಗಿ ಕರಾರನ್ನು ಏಕಪಕ್ಷೀಯವಾಗಿ ಮೊದಲನೇ ಪಾರ್ಟಿಗಳು ರದ್ದು ಪಡಿಸುವುದಾಗಲೀ ಅನವಶ್ಯಕ ನೇರ ಮತ್ತು ಪರೋಕ್ಷ ವ್ಯಾಜ್ಯ ಸೃಷ್ಟಿಸುವುದಾಗಲೀ ಮಾಡುವ ಹಾಗಿಲ್ಲ.

## ಷೆಡ್ಯೂಲ್ ಸ್ವತ್ತು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ದೊಡ್ಡಬೆಳವಂಗಲ ಹೋಬಳಿ, ಹನುಮಾಪುರ ಗ್ರಾಮದ ಸರ್ವೆ ನಂಬರ್ 6/1 ರಲ್ಲಿ ಒಟ್ಟು 1 ಎಕರೆ 6 ಗುಂಟೆ ಉಳ್ಳದ್ದರ ಪೈಕಿ ಹಾಲಿ ನಮಗೆ ಕೊಡಲು ಒಪ್ಪಿರುವ ಜಮೀನಿಗೆ ಚಕ್ಕುಬಂದಿಯಾಗಿ:

| | | |
|---|---|---|
| ಪೂರ್ವಕ್ಕೆ | : | ಭೀಮಪ್ಪನವರ ಜಮೀನು ಸರ್ವೆ ನಂ. 6/2. |
| ಪಶ್ಚಿಮಕ್ಕೆ | : | ರಾಮಪ್ಪನವರ ಜಮೀನು ಸರ್ವೆ ನಂ. 6/2ಎ. |
| ಉತ್ತರಕ್ಕೆ | : | ವೀರಭದ್ರಪ್ಪನವರ ಜಮೀನು ಸರ್ವೆ ನಂ. 6/1ಎ. |
| ದಕ್ಷಿಣಕ್ಕೆ | : | ರಸ್ತೆ. |

ಈ ಮಧ್ಯೆ ಇರುವ ಜಮೀನು ಈ ಕ್ರಯಕ್ಕಾಗಿ ಕರಾರಿನ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಮೊದಲನೇ ಪಾರ್ಟಿಗಳು ಎರಡನೇ ಪಾರ್ಟಿಗಳು

ಸಾಕ್ಷಿಗಳು:

1.

2.